## ಶಕುಂತಲಾ ಮನದ ಮಾತು

'ಅವಾರ್ಡ್ ಎಂದರೆ ಏನೆಂಬುದು ನನಗೆ ಗೊತ್ತಿಲ್ಲ. ಬೆಂಗಳೂರಿನ ಸ್ವಯಂ ಸೇವಾ ಸಂಸ್ಥೆಯೊಂದರಲ್ಲಿ ಕೆಲಸ ಮಾಡುವ ನಂದಿನಿ ಎನ್ನುವವರು ನಮ್ಮ ಸಭೆಗಳಿಗೆ ಬರ್ತಾರೆ. ಅವರು ಎಲ್ಲೋ ಅವಾರ್ಡ್ ಕುರಿತ ಪ್ರಕಟಣೆಯನ್ನು ನೋಡಿ ನಮ್ಮ 'ಸಮಗ್ರ ಗ್ರಾಮೀಣ ಆಶ್ರಮ'ದ ವಿವರವನ್ನು ಕಳುಹಿಸಿದ್ದಾರೆ. ವಿಶ್ವಸಂಸ್ಥೆಯ ಆ ಪುರಸ್ಕಾರಕ್ಕೆ ಮೊದಲ ಹಂತದಲ್ಲಿ 200 ಸಂಘಟನೆಗಳ ಅರ್ಜಿಗಳು ಆಯ್ಕೆಯಾಗಿದ್ದು, ಸಂಸ್ಥೆಯ ಮಾನದಂಡಗಳ ಅನುಸಾರ ಮೌಲ್ಯಮಾಪನ ಮಾಡುತ್ತಾ ಬಂದಾಗ ನಮ್ಮ ಸಂಘಟನೆ 10ನೇ ಸ್ಥಾನಕ್ಕೆ ಬಂದಿದೆ. ಉಡುಪಿಗೆ ಪ್ರಶಸ್ತಿ ಸಮಿತಿ ಭೇಟಿ ನೀಡಿ ಜಿಲ್ಲೆಯ ಹತ್ತು ಕಡೆ ನಮ್ಮ ಪರಿಶೀಲಿಸಿತು. ಸಮುದಾಯದ ಕೆಲವರು ಸರ್ಕಾರದ ಯಾವ ಸವಲತ್ತನ್ನೂ ಪಡೆಯದೆ ಮೊದಲಿನಂತೆಯೇ ಇದ್ದಾರೆ. ಅಂತಹ ಸ್ಥಳಗಳನ್ನೂ ಸೇರಿದಂತೆ ಪುನರ್ವಸತಿ ಹೊಂದಿದ ಕುಟುಂಬಗಳನ್ನೂ ನಾವು ತೋರಿಸಿದೆವು. ಸಮಿತಿ ಭೇಟಿ ನೀಡಿ ಹೋದ ಮೇಲೆ ನಮ್ಮ ಸಂಘಟನೆಗೆ ನಾಲ್ಕನೇ ಸ್ಥಾನ ಲಭಿಸಿತ್ತು. ಅಂತಿಮ ಸುತ್ತಿನಲ್ಲಿ ನಮ್ಮನ್ನೇ ಗುರುತಿಸಿ ಚಿನ್ನದ ಪದಕವನ್ನು ನೀಡುತ್ತಿದೆ.

ತಡವಾದರೂ ನಮ್ಮ ಸಮುದಾಯ ಎಲ್ಲ ಕ್ಷೇತ್ರದಲ್ಲಿಯೂ ಪ್ರವೇಶ ಪಡೆಯುತ್ತಿದೆ. ಸುಮಾರು 15 ಸಾವಿರ ಜನಸಂಖ್ಯೆ ಇರುವ ನಮ್ಮ ಸಮುದಾಯದಲ್ಲಿ 200 ಮಕ್ಕಳು ಉನ್ನತ ಶಿಕ್ಷಣವನ್ನು ಪೂರೈಸಿದ್ದಾರೆ. ವಿವಿಧ ಶಿಸ್ತಿನ ಅಧ್ಯಯನ ಕೈಗೊಂಡು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಕೃಷಿ ವೃತ್ತಿಯಾಗಬೇಕು ಎನ್ನುವುದು ನಮ್ಮ ಗುರಿ. ಈ ಮೊದಲು ಆಹಾರಧಾನ್ಯಗಳನ್ನು ನಾವು ಉತ್ಪಾದಿಸಿಲ್ಲ. ಸಿದ್ಧ ಆಹಾರವನ್ನು ಬೇಡಿ ಸಂಗ್ರಹಿಸಿ ತಿನ್ನುತ್ತಿದ್ದೆವು. ಇಲ್ಲದಿದ್ದರೆ ಮದುವೆ–ಶುಭ ಸಮಾರಂಭಗಳಲ್ಲಿ ಆಯ್ದುಕೊಂಡು ಬಂದು ಊಟ ಮಾಡುತ್ತಿದ್ದೆವು. ನಮಗೆ ಒಂದೇ ಒಂದು ಹಬ್ಬ ಎನ್ನುವುದು ಇರಲಿಲ್ಲ. ಊರಲ್ಲಿ ಯಾರು ಹಬ್ಬ ಮಾಡಿದರೂ ಅಲ್ಲಿಗೆ ಹೋಗಿ ಬೇಡಿ ತಂದು ಉಣ್ಣುತ್ತಿದ್ದೆವು, ಅನ್ನ ಸಿಕ್ಕರೆ ಅದೇ ನಮ್ಮ ಹಬ್ಬವಾಗುತ್ತಿತ್ತು.

ಈಗ ನಿಧಾನಕ್ಕೆ ಬದಲಾಗುತ್ತಿದ್ದೇವೆ. ನಮ್ಮ ಮಕ್ಕಳನ್ನು ಓದಿಸಬೇಕು. ಅವರನ್ನು 10ನೇ ತರಗತಿಯವರೆಗೆ ಓದಿಸುವುದೇ ನಮಗೆ ದೊಡ್ಡ ಕೆಲಸ. ಆ ನಂತರ ಅವರ ಪಾಡಿಗೆ ಅವರು ಓದುತ್ತಾರೆ. ಅಕ್ಷರದತ್ತ ಇತ್ತೀಚೆಗಷ್ಟೆ ಮಕ್ಕಳು ಕಣ್ಣು ಹಾಯಿಸಿದ್ದಾರೆ. ನಮಗೆ ಇಬ್ಬರು ಮಕ್ಕಳು. ಸತೀಶ್ ಎಂ.ಟೆಕ್. ಮಾಡಿ ಬೆಂಗಳೂರಿನಲ್ಲಿ ಒಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಮತ್ತೊಬ್ಬ ಸಂದೀಪ್, ಅವನು ಭೌತಶಾಸ್ತ್ರದಲ್ಲಿ ಎಂ.ಎಸ್ಸಿ. ಮಾಡಿ ಮಣಿಪಾಲದಲ್ಲಿ ಕೆಲಸ ಮಾಡುತ್ತಿದ್ದಾನೆ. ನಮ್ಮ ಮಕ್ಕಳಿಗೆ ಅವರ ಬೋಧಕರೇ ನೆರವು ನೀಡಿ ಉದ್ಯೋಗ ಕಲ್ಪಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ನಮ್ಮ ಸಮುದಾಯಕ್ಕೆ ಶಿಕ್ಷಣದ ಅರಿವು ಮೂಡಿದೆ. ಈ ಮೊದಲು ಅರ್ಧಕ್ಕೆ ಶಿಕ್ಷಣವನ್ನು ಮೊಟಕು ಮಾಡುವವರ ಪ್ರಮಾಣ ಹೆಚ್ಚಿತ್ತು. ನಾನು ಏಳನೇ ತರಗತಿಗೆ ಓದನ್ನು ನಿಲ್ಲಿಸಿದ್ದೇನೆ. ನನ್ನ ಪತಿ ಒಂದನೇ ತರಗತಿಗೆ ನಿಲ್ಲಿಸಿದ್ದಾರೆ' ಎಂದು ಶಕುಂತಲಾ ವಿವರಿಸುತ್ತಾರೆ.



## ಕೊರಗರ ಭೂಮಿ ಹಬ್ಬ

ಭೂ ಒಡೆತನದ ನಂತರ ಕೊರಗರೂ ಹಿಡುವಳಿದಾರರಾಗಿದ್ದಾರೆ. ಹತ್ತು ವರ್ಷದ ಹಿಂದೆ ಆಗಸ್ಟ್ 18ರಂದು ಭೂಮಿಗಾಗಿ ದೊಡ್ಡ ಚಳವಳಿಯನ್ನು ರೂಪಿಸಿದ್ದರು. ಅಂದು ರೂಪಿಸಿದ ಹೋರಾಟದ ಫಲವಾಗಿ ಆ ಸಮುದಾಯ 600 ಎಕರೆ ಜಮೀನನ್ನು ಪಡೆದಿದೆ. ಅದರ ಹರ್ಷದ ಸ್ಮರಣೆಗೆ ಹಬ್ಬವನ್ನು ಆ ದಿನ ಒಟ್ಟಾಗಿ ಮಾಡುತ್ತಾರೆ. ಅಂದು ಎಲ್ಲರೂ ಸಂಭ್ರಮಿಸಿ ಸಾಮೂಹಿಕವಾಗಿ ಊಟವನ್ನು ಮಾಡುತ್ತಾರೆ. ಅದಕ್ಕಾಗಿ ಅವರಲ್ಲೇ ವಂತಿಗೆಯನ್ನು ಸಂಗ್ರಹಿಸಿಕೊಂಡಿರುತ್ತಾರೆ.

ಪೌಷ್ಟಿಕ ಆಹಾರಕ್ಕಾಗಿ ಕೊರಗ ಸಮುದಾಯ ನಡೆಸಿದ ಹೋರಾಟ ಸ್ಮರಣೀಯ. 'ಕೊರಗರು ತಲೆತಲಾಂತರದಿಂದ ಬೇಡಿ ಇಲ್ಲವೇ ಆಯ್ದು ತಿನ್ನುತ್ತಾ ಬಂದಿದ್ದರು. ಮಳೆಗಾಲದಲ್ಲಿ ಸಮಾರಂಭ, ಉತ್ಸವಗಳು ನಡೆಯುವುದಿಲ್ಲ. ಆಗ ಆಹಾರದ ಸಮಸ್ಯೆ ಉಂಟಾಗುತ್ತದೆ. ಆ ಸಮುದಾಯದ ಮಕ್ಕಳು ಮತ್ತು ಮಹಿಳೆಯರಲ್ಲಿ ಅಪೌಷ್ಟಿಕತೆ– ರಕ್ತಹೀನತೆ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳುವುದರಿಂದ ಪೌಷ್ಟಿಕ ಆಹಾರ ಪೂರೈಕೆಯ ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟಿದ್ದರು. ಅದರ ಪರಿಣಾಮ ಕರ್ನಾಟಕ ಸರ್ಕಾರ 2008ರಲ್ಲಿ ಎಲ್ಲ ಬುಡಕಟ್ಟು ಸಮುದಾಯಕ್ಕೂ ಪೌಷ್ಟಿಕ ಆಹಾರವನ್ನು ವರ್ಷದಲ್ಲಿ ಆರು ತಿಂಗಳು ಪೂರೈಸುವ ಕಾಯ್ದೆಯನ್ನು ರೂಪಿಸಿತು. ಕೊರಗ ಸಮುದಾಯದ ಈ ಹೋರಾಟದಿಂದ ರಾಜ್ಯದ ಬೇರೆ ಬುಡಕಟ್ಟುಗಳಿಗೂ ಅನುಕೂಲವಾಯಿತು. ಈ ವರ್ಷ ಉಡುಪಿ ಜಿಲ್ಲೆಯಲ್ಲಿ ಪೌಷ್ಟಿಕ ಆಹಾರ ಪೂರೈಕೆ ಆಗಿಲ್ಲ. ಐಟಿಡಿಪಿಯ ಟೆಂಡರ್‌ನಲ್ಲಿ ಏನೋ ಸಮಸ್ಯೆ ಆಗಿದ್ದರಿಂದ ಹೀಗಾಗಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಹೇಳಿದ್ದಾರೆ' ಎಂದು ಸಂಜೀವ ಕೊರಗ ಹೇಳುತ್ತಾರೆ.

## ಅಜಲು ಎಂಬ ಮೌಢ್ಯ

ಅಜಲು ಎನ್ನುವ ಪದಕ್ಕೆ ಹಕ್ಕಿನ ಪ್ರದೇಶ ಅಥವಾ ಮೀಸಲು ಪ್ರದೇಶ ಎನ್ನುವ ಅರ್ಥ ಇದೆ. ಅಂದರೆ ಒಂದು ನಿರ್ದಿಷ್ಟ ಭೂಪ್ರದೇಶದಲ್ಲಿ ನಡೆಯುವ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಭಾಗಿಯಾಗುವ 'ಹಕ್ಕು'ದಾರ. ಕೊರಗ ಸಮುದಾಯದ ಒಂದು ಕುಟುಂಬಕ್ಕೆ 'ಅಜಲು' ಎಂದು ಗುರುತಿಸಲಾಗುತ್ತಿತ್ತು. ಆ ಸರಹದ್ದಿನಲ್ಲಿ ಹಬ್ಬ, ದೇವರ ಉತ್ಸವ, ಜಾತ್ರೆ ಕಂಬಳದಲ್ಲಿ ಅವರು ಡೋಲು ಹೊಡೆಯಬೇಕು. ಕಂಬಳದ ಭೂಮಿಯನ್ನು ಹದಗೊಳಿಸಲು ನೆರವು ನೀಡಬೇಕಿತ್ತು. ಅಂತೆಯೇ ಕುಟುಂಬಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಿತ್ತು.

ಗರ್ಭಿಣಿಯರಿಗೆ ಸೀಮಂತ ಮಾಡುವುದು ಸಂಪ್ರದಾಯ. ಆ ಕಾರ್ಯಕ್ರಮಕ್ಕೆ ಅಜಲಿನ ವ್ಯಾಪ್ತಿಯಲ್ಲಿ ಬರುವ ಕುಟುಂಬ ಹೋಗಬೇಕು. ಹೋದವರಿಗೆ ಊಟದಲ್ಲಿ ಗರ್ಭವತಿಯ ಉಗುರು ಮತ್ತು ಕೂದಲನ್ನು ಸೇರಿಸಿ ಕೊಡುತ್ತಾರೆ. ಹೀಗೆ ಅನ್ನದಾನ ಮಾಡುವುದರಿಂದ ಗರ್ಭಿಣಿಯಲ್ಲಿನ ಭೀತಿ ಹೋಗುತ್ತದೆ; ಆಕೆಗೆ ಎದುರಾಗುವ ಋಣಾತ್ಮಕ ಆಲೋಚನೆ ದೂರವಾಗುತ್ತದೆ ಎನ್ನುವುದು ನಂಬಿಕೆ.

ಅದನ್ನು ಅನುಗಾಲದಿಂದಲೂ ಅನುಸರಿಸಿಕೊಂಡು ಬಂದಿದ್ದರು. ಅಜಲು ಜಾತಿ ಆಧಾರಿತ ಮೇಲುಕೀಳಿನ ಶ್ರೇಣೀಕರಣವನ್ನು ಪೋಷಿಸುತ್ತದೆ. ವ್ಯಕ್ತಿಯೊಬ್ಬರ ದೇಹದ ತ್ಯಾಜ್ಯ ರೂಪದ ವಸ್ತುವನ್ನು ಮತ್ತೊಬ್ಬರ ಊಟದಲ್ಲಿ ಬೆರೆಸಿ ಕೊಡುವುದು ಅಮಾನವೀಯ ಕುರೂಪ ಎಂದು ಕರ್ನಾಟಕ ಸರ್ಕಾರ ಪದ್ಧತಿಯನ್ನು 2000ದಲ್ಲಿ ನಿಷೇಧಿಸಿದೆ.